

# ಶ್ರೀಲೀಲಾವಿನೋದ

ಸ್ಯಾಂಡಲ್‌ವುಡ್‌ನಲ್ಲಿ ಶ್ರೀಲೀಲಾ ವಿನೋದ ಜೋರಾಗಿಯೇ ಇದೆ. ಯಾರೀ ಶ್ರೀಲೀಲಾ ಎಂದು ಕೇಳುವಂತಿಲ್ಲ. ಎಲ್ಲರೂ ಬೆಳ್ಳಿತೆರೆಗೆ ಅಡಿಯಿಟ್ಟರೆ ಇವರು ಹಿರಿತೆರೆಗೆ ಕಿಸ್ ಮಾಡಿದವರು! ಹಾ, ಅಪಾರ್ಥ ಮಾಡಿಕೊಳ್ಳಬೇಡಿ. ಶ್ರೀಲೀಲಾ ಅಭಿನಯದ ಮೊದಲ ಸಿನಿಮಾ ಎ.ಪಿ. ಅರ್ಜುನ್ ನಿರ್ದೇಶನದ 'ಕಿಸ್'. ಹೆಸರೇ ಹೀಗಿರಬೇಕಾದರೆ ಸಿನಿಮಾ ಹೇಗಿರಬೇಡ? ಸಿನಿಮಾದಲ್ಲಿ ನಟಿಸಲು ಅವಕಾಶ ಬಂದಾಗ ಇದೇ ಪ್ರಶ್ನೆ ಶ್ರೀಲೀಲಾ ಅವರ ತಂದೆ–ತಾಯಿಯ ಮನಸಲ್ಲೂ ಮೂಡಿತ್ತು. ಆದರೆ ಕಥೆ ಹೇಳಿದ ಮೇಲೆ ಅವರು ನಿರಾಳರಾದರು. ಪ್ರೇಕ್ಷಕರೂ ಸಿನಿಮಾ ನೋಡಿದ ಮೇಲೆ ನಿರಾಳರಾಗುತ್ತಾರೆಯೇ ಎನ್ನುವುದನ್ನು ಕಾದು ನೋಡಬೇಕು.

ಮೊದಲ ಸಿನಿಮಾ ರಿಲೀಸ್ ಆಗುವ ಮೊದಲೇ ಅವರಿಗೆ ಇನ್ನೊಂದು ಬಂಪರ್ ಅವಕಾಶ ಸಿಕ್ಕಿದೆ. ಅದು ಚೇತನ್ ನಿರ್ದೇಶನದ ಶ್ರೀಮುರಳಿ ಅಭಿನಯದ 'ಭರಾಟೆ'ಯಲ್ಲಿ ನಾಯಕಿಯಾಗಿ ಅಭಿನಯಿಸುವ ಅವಕಾಶ. ಶ್ರೀಮುರಳಿ ಸಿನಿಮಾಗಳೆಂದರೆ ಆ್ಯಕ್ಷನ್ ಜೋರಾಗಿಯೇ ಇರುತ್ತದೆ. ಆ ಆ್ಯಕ್ಷನ್ ನಡುವೆ ಕಲರ್‌ಫುಲ್ ಹೂಗುಚ್ಛದಂತೆ, ತಣ್ಣನೆ ಬೀಸುವ ತಂಗಾಳಿಯಂತೇ ಶ್ರೀಲೀಲಾ ಸುಳಿದಾಡುತ್ತಾರಂತೆ. ಅವರಿಬ್ಬರ ಕಾಂಬಿನೇಷನ್ ಸಖತ್ ಆಗಿ ವರ್ಕೌಟ್ ಆಗುತ್ತದೆ ಎನ್ನುತ್ತಿದ್ದಾರೆ ಪೋಸ್ಟರ್ ನೋಡಿದ ಅಭಿಮಾನಿಗಳು.

ಅಂದಹಾಗೆ ಈ ಹುಡುಗಿ ಬರೀ ಸ್ಟಾರ್ ಸಿನಿಮಾಗಳಲ್ಲಿಯಷ್ಟೇ ನಟಿಸಬೇಕು ಎಂಬ ಹಟವಿಲ್ಲ. ಗ್ಲ್ಯಾಮರಸ್ ಆಗಿ ಕಾಣಿಸಿಕೊಳ್ಳಲು ಹಿಂಜರಿಯುವ ಇವರಿಗೆ ಪ್ರಯೋಗಾತ್ಮಕ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಹಂಬಲ ಇದೆಯಂತೆ. ಭರತನಾಟ್ಯ, ಸ್ವಿಮ್ಮಿಂಗ್, ಸ್ಕೇಟಿಂಗ್, ಹಾಕಿ, ಬಾಕ್ಸಿಂಗ್ ಹೀಗೆ ಹಲವು ವಿದ್ಯೆಗಳನ್ನು ಕಲಿತಿರುವ ಶ್ರೀಲೀಲಾ ಅವರಿಗೆ ನಟನೆಯೂ ತಮ್ಮ ಕೈಹಿಡಿದಿರುವುದು ಬದುಕನ್ನು ಇನ್ನಷ್ಟು ಕಲರ್‌ಫುಲ್ ಆಗಿಸಿದೆಯಂತೆ.

■ ಪದ್ಮನಾಭ ಭಟ್

# ಆಶಾದಾಯಕ ಅವಕಾಶ

ಚಂದನವನದಲ್ಲಿ ಮಿಂಚಲು ಬರೀ ಸೌಂದರ್ಯ ಪ್ರತಿಭೆ ಅಷ್ಟೇ ಇದ್ದರೆ ಸಾಲದು, ಅದೃಷ್ಟವೂ ಬೇಕು ಎಂಬುದು ಹಳೆಯ ಮಾತು. ಈ ಅದೃಷ್ಟ ಕೈಹಿಡಿಯುವುದು ಅಪರೂಪ. ಈಗ ಆ ಅದೃಷ್ಟ ದೇವತೆ ಆಶಾ ಭಟ್ ಎಂಬ ಬೆಡಗಿಯ ನೆತ್ತಿ ನೇವರಿಸಿದೆ. ಅದು ರಾಬರ್ಟ್ ರೂಪದಲ್ಲಿ!

ದರ್ಶನ್ ಅಭಿನಯದ, ತರುಣ್ ಸುಧೀರ್ ನಿರ್ದೇಶನದ 'ರಾಬರ್ಟ್' ಸಿನಿಮಾಗೆ ಆಶಾ ಭಟ್ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಭದ್ರಾವತಿಯ ಈ ಬೆಡಗಿಯ ಅದೃಷ್ಟದ ಆಟ ಶುರುವಾಗಿದ್ದು ಇಲ್ಲಿಂದಲೇ ಏನಲ್ಲ. 2014ರಲ್ಲಿ ಮಿಸ್ ಸೂಪರ್‌ನ್ಯಾಷನಲ್ ಆಗಿ ಆಯ್ಕೆಯಾಗಿದ್ದ ಅವರು ಬಿ–ಟೌನ್‌ಲ್ಲಿಯೂ ತಮ್ಮ ಚಮಕ್ ತೋರಿಸಿ ಬಂದವರು. ವಿದ್ಯುತ್ ಜಮ್ವಾಲ್ ನಟನೆಯ 'ಜಂಗ್ಲಿ' ಸಿನಿಮಾದಲ್ಲಿ ನಟಿಸಿದ ಅನುಭವ ಇವರಿಗಿದೆ. ಈಗ ಚಾಲೆಂಜಿಂಗ್ ಸ್ಟಾರ್ ಕೈಯಿಂದ ಸೊಂಟ ಬಳಸಿಕೊಂಡು ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಡುತ್ತಿದ್ದಾರೆ. ಈ ಚಿತ್ರದ ಕಥೆ ಮತ್ತು ಪಾತ್ರ ಎರಡೂ ಅವರಿಗೆ ಥ್ರಿಲ್ ಕೊಟ್ಟಿದೆಯಂತೆ. ಅಲ್ಲದೆ ದರ್ಶನ್ ಅಂಥ ಸ್ಟಾರ್ ನಟನ ಜೊತೆ ನಟಿಸಲು ಮೊದಲ ಸಿನಿಮಾದಲ್ಲಿಯೇ ಅವಕಾಶ ಸಿಕ್ಕಿರುವುದು ಇನ್ನಷ್ಟು ಖುಷಿ ಹೆಚ್ಚಿಸಿದೆ.

ಸದ್ಯದಲ್ಲಿಯೇ ಅವರು ಚಿತ್ರೀಕರಣದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಚಿತ್ರವನ್ನು ಗೆಲ್ಲಿಸಿ ತಮಗೆ ಕನ್ನಡದ ಜನ ಅದ್ದೂರಿ ಸ್ವಾಗತ ಕೋರುತ್ತಾರೆ ಎಂಬ ನಂಬಿಕೆಯೂ ಅವರ ಮನಸಲ್ಲಿದೆ. ■

